## ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ತಿ.ನರಸೀಪುರ.

**ಸಿ.ಸಿ.ನಂಃ 1822/2022**

**ಫಿರ್ಯಾದಿದಾರಃ** ಭಾಗ್ಯಜ್ಯೋತಿ,
ಕೋಂ.ಶಿವಕುಮಾರ .ಬಿ,
ಸುಮಾರು 44 ವರ್ಷ ವಯಸ್ಸು,
ವಾಸ. ಎಸ್.ಆರ್.ಪಿ. ರಸ್ತೆ,
ಸರ್ಕಾರಿ ಆಸ್ಪತ್ರೆ ಎದುರು, ವಾರ್ಡ್ ನಂ.5,
ಬನ್ನೂರು ಟೌನ್, ತಿ.ನರಸೀಪುರ ತಾಲ್ಲೂಕು.

**- ವಿರುದ್ಧ -**

**ಆರೋಪಿ** ಃ ಸುಮಾ ಚಿತ್ರಬಾನು,
ಕೋಂ.ಎಂ.ಕೆ.ಚಿತ್ರಬಾನು,
ಸುಮಾರು 40 ವರ್ಷ ವಯಸ್ಸು,
ವಾಸ ತೆಲಗು ಸ್ಟ್ರೀಟ್,
ವಿರಾಜಪೇಟೆ ಟೌನ್ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ,

## <u>ದಂ. ಪ್ರ. ಸಂ. ಕಲಂ 251 ರ ಅಡಿಯಲ್ಲಿ ಆಪಾದನೆ</u>

ಆರೋಪಿಯಾದ ನೀವು ನಿಮ್ಮ ದರದ್ದು ನಿಮಿತ್ತ ಫಿರ್ಯಾದಿರವರಿಂದ ದಿನಾಂಕ **09.10.2021** ರಂದು ರೂ.**6,00,000/-** ರೂಗಳ ಸಾಲವನ್ನು ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ಮುಂದಿನ ದಿನಾಂಕ ಅಂದರೆ ದಿಃ**09.11.2021** ಎಂದು ನಮೂದಿಸಿ ರೂ.**6,00,000/-** ಕ್ಕೆ ಕರ್ನಾಟಕ ಗ್ರಾಮೀಣ ಬ್ಯಾಂಕ್, ವಿರಾಜ್ ಪೇಟೆ ಶಾಖೆ ಮೇಲೆ ತೆಗೆಯಲಾದ ಚೆಕ್ ಸಂಖ್ಯೆ **976158** ರನ್ನು ಜಾರಿ ಮಾಡಿದ್ದೀರಿ ಹಾಗೂ ಸದರಿ ಚೆಕ್ಕನ್ನು ನೀವು ಹೇಳಿದಾಗ ನಗಧೀಕರಿಸಲು ಹೇಳಿರುತ್ತೀರಿ. ಆರೋಪಿಯಾದ ನೀವು ಸದರಿ ಚೆಕ್ಕನ್ನು ನಗಧೀಕರಿಸಲು ಹೇಳಿದ್ದು ನಂತರ ಫಿರ್ಯಾದಿದಾರರು ಕರ್ನಾಟಕ ಗ್ರಾಮೀಣ ಬ್ಯಾಂಕ್, ಬನ್ನೂರು ಶಾಖೆ ಮುಖಾಂತರ ನಗಧೀಕರಿಸಲು ಹಾಜರು ಮಾಡಿದಾಗ ದಿಃ**27.01.2022** ರಂದು **"Funds Insufficient and Drawer's signature is differs"** ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ ಹಾಗೂ ಈ ಬಗ್ಗೆ ನಿಮಗೆ ಫಿರ್ಯಾದಿದಾರರು ದಿಃ**09.02.2022** ರಂದು ನೋಟೀಸು ಕೊಟ್ಟಿದ್ದು, ಸದರಿ ನೋಟೀಸನ್ನು ಪಡೆದು ದಿನಾಂಕ **28.02.2022** ರಂದು ಪ್ರತ್ಯುತ್ತರ ನೀಡಿದ್ದು ಈವರೆಗೂ ಹಣ ಪಾವತಿ ಮಾಡಿರುವುದಿಲ್ಲ ಆದುದರಿಂದ ಈ ಮೂಲಕ ಕಲಂ **138** ಎನ್.ಐ. ಆ್ಯಕ್ಟ್ ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

**ಪ್ರಶ್ನೆ–1 ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?**
ಉತ್ತರಃ

**ಪ್ರಶ್ನೆ-2 ನೀವು ತಪ್ಪು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯಾ?**
ಉತ್ತರಃ

(ಮೇಲಿನ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿಯಿಂದ ಪಡೆದಿದ್ದು, ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ.)

**ದಿನಾಂಕಃ**

**ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.**
**ತಿ.ನರಸೀಪುರ.**